

ಜೆರುಸಲೇಂ ಸೆಮೆಟಿಕ್ ಧರ್ಮಗಳ ಕೂಡಲ ಸಂಗಮ. ಇದು ಕ್ರೈಸ್ತ, ಯೆಹೂದಿ ಮತ್ತು ಇಸ್ಲಾಂ– ಮೂರೂ ಧರ್ಮದವರ ಶ್ರದ್ಧಾಕೇಂದ್ರ. ಮೂರು ಧರ್ಮಗಳಿಗೂ ಪವಿತ್ರವೆನಿಸಿದ ಇನ್ನೊಂದು ನಗರ ಭೂಮಂಡಲದಲ್ಲಿಲ್ಲ.

ಗತಕಾಲದ ಧಾರ್ಮಿಕ ಸಂಘರ್ಷಗಳು ಹೊಸ ತಿರುವನ್ನು ಪಡೆದು ವರ್ತಮಾನಕ್ಕೂ ಚಾಚಿಕೊಂಡಿವೆ. ಬ್ರಿಟಿಷರು ಭಾರತ ಬಿಟ್ಟುಹೋಗುವಾಗ ಮಾಡಿದಂತೆ ಈ ಸೀಮೆಯನ್ನು ಅರಬ್ಬರಿಗೂ ಯಹೂದಿಗಳಿಗೂ ಹಂಚಿ, ಇಸ್ರೇಲ್ ಎಂಬ ಹೊಸ ದೇಶವನ್ನು ಸ್ಥಾಪಿಸಿ (1948) ಹೋದರು. ಮೂರನೇ ದೇಶವೊಂದು ತನ್ನ ಹಿತಾಸಕ್ತಿಗಾಗಿ ಒಂದೇ ಸಂಸ್ಕೃತಿ ಪರಂಪರೆಗೆ ಸೇರಿದ, ಸಂಕೀರ್ಣವಾದ ಚರಿತ್ರೆಯುಳ್ಳ ದೇಶವನ್ನು ಮನಬಂದಂತೆ ವಿಭಜಿಸಿದರೆ ಉಂಟಾಗುವ ಗಾಯ ಬೇಗ ಮಾಯುವುದಿಲ್ಲ. ಅದನ್ನು ಭಾರತ– ಪಾಕಿಸ್ತಾನ, ದಕ್ಷಿಣ ಮತ್ತು ಉತ್ತರ ಕೊರಿಯಾಗಳು ಈಗಲೂ ಅನುಭವಿಸುತ್ತಿವೆ. ಜರ್ಮನಿ ಅನುಭವಿಸಿ ಹೊರಬಂದಿದೆ. ವಿಶ್ವಸಂಸ್ಥೆಯು ಜೆರುಸಲೇಮನ್ನು ವಿಭಜಿಸಿ ಮಾಡಿದ ಹಂಚಿಕೆ ಇಸ್ರೇಲಿಗಳಿಗೂ ಪ್ಯಾಲೆಸ್ತೈನಿಯರಿಗೂ ತೃಪ್ತಿ ತಂದಿಲ್ಲ. ಅದರಲ್ಲೂ ಯಹೂದಿ ಮತ್ತು ಅರಬ್ಬರ ಉಗ್ರಗುಂಪುಗಳು ಮುಗ್ಧರ ಸಂಹಾರ ಮಾಡಿವೆ. ನಮಗೆ ಯೆಹೋವಾ ದಯಪಾಲಿಸಿದ ಪವಿತ್ರ ಭೂಮಿಯೆಂದು ಯಹೂದಿಗಳು; ಇದು ಮೂಲತಃ ಅರಬರ (ಅರಬ್ಬಿ ಮಾತಾಡುವ ಕ್ರೈಸ್ತರ ಮತ್ತು ಮುಸ್ಲಿಮರ) ಭೂಮಿ. ನೀವು ವಲಸಿಗರಾಗಿ ಬಂದು ನಮ್ಮನ್ನು ಒಕ್ಕಲೆಬ್ಬಿಸಿದಿರಿ ಎಂದು ಪ್ಯಾಲೆಸ್ತೈನರು ಎದುರು ಬದುರು ನಿಂತಿದ್ದಾರೆ. ಇಡೀ ಪ್ರದೇಶವನ್ನು ಅರಬರು 'ಪ್ಯಾಲೆಸ್ತೈನ್' ಎಂದೂ, ಯಹೂದಿಗಳು 'ಇಸ್ರೇಲ್' ಎಂದೂ ಕರೆದುಕೊಳ್ಳುತ್ತ, ಎದುರು ಪಕ್ಷದವರ ಅಸ್ತಿತ್ವವನ್ನೇ ನಿರಾಕರಿಸುತ್ತಿದ್ದಾರೆ.

ಇಸ್ರೇಲಿನ ಪ್ರವಾಸೋದ್ಯಮ ಇಲಾಖೆ ಒದಗಿಸಿದ್ದ ನಕ್ಷೆಯಲ್ಲಿ ಪ್ಯಾಲೆಸ್ತೇನಿನ ಸುಳಿವೇ ಇರಲಿಲ್ಲ! ಪ್ಯಾಲೆಸ್ತೇನಿನ ಊರುಗಳಲ್ಲಿ ವಿಮೋಚನ ಹೋರಾಟದ ನಾಯಕ ಯಾಸಿರ್ ಅರಾಫತ್ ಚಿತ್ರವಿರುವ ನಕ್ಷೆಯ ಕಟ್ಟೆಗಳಿದ್ದು ಅಲ್ಲಿ ಇಸ್ರೇಲಿನ ಹೆಸರೇ ಕಾಣೆಯಾಗಿತ್ತು. ಎರಡೂ ದೇಶಗಳು ಜೆರುಸಲೇಂ ತಮ್ಮ ರಾಜಧಾನಿ ಎಂದು ಘೋಷಿಸಿಕೊಂಡಿವೆ. ಈ ಸಂಘರ್ಷಕ್ಕೆ ಏಳು ದಶಕಗಳು ಸಂದವು. ನೂರಾರು ವಿಶ್ವಸಂಸ್ಥೆಯ ನಿರ್ಣಯಗಳು, ಶಾಂತಿಸಭೆಗಳು ನಡೆದವು. ಪ್ಯಾಲೆಸ್ತೈನ್ ಹಿಂದೆ ಜೋರ್ಡಾನ್, ಸಿರಿಯಾ, ಈಜಿಪ್ಟ್, ಲೆಬನಾನ್, ಇರಾಕ್, ಇರಾನ್‌ಗಳು; (ಹಿಂದೆ ಭಾರತ ಕೂಡ) ಇಸ್ರೇಲಿನ ಬೆನ್ನಿಗೆ ಪಾಶ್ಚಿಮಾತ್ಯ ದೇಶಗಳು ಮತ್ತು ಅಮೆರಿಕಾ.

ಪ್ಯಾಲೆಸ್ತೈನ್ ಇಸ್ರೇಲ್ ಸಂಘರ್ಷವು ನೂರಾರು ಯುದ್ಧಗಳನ್ನು ಹಡೆದು ಲಕ್ಷಾಂತರ ಜನರ ಸಾವಿಗೆ ಕಾರಣವಾಗಿದೆ. ಇದು ಎಂದೂ ಮುಗಿಯದ ಯುದ್ಧದಂತಿದೆ. ಇಲ್ಲಿನ ದ್ರಾಕ್ಷಿತೋಟಗಳು ಉತ್ಪಾದಿಸಿರುವ ದ್ರಾಕ್ಷಾರಸಕ್ಕಿಂತ ಹೆಚ್ಚಿನ ಪ್ರಮಾಣದ ನೆತ್ತರನ್ನು ಇಲ್ಲಿನ ನೆಲ ಕುಡಿದಿರುವಂತಿದೆ. ಜೆರುಸಲೇಂ ಬ್ರೆಕ್ಟನ 'ಕಕೇಸಿಯನ್ ಚಾಕ್ ಸರ್ಕಲ್' ನಾಟಕದೊಳಗೆ ಇಬ್ಬರು ತಾಯಂದಿರ ಕೈಗೆ ಸಿಕ್ಕು ಎಳೆದಾಡಿಸಿಕೊಳ್ಳುವ ನತದೃಷ್ಟ ಮಗುವಿನಂತೆ ಭಾಸವಾಗುತ್ತದೆ.




# ಶ್ರೀ ಪಂಚಮುಖಿ ಜ್ಯೋತಿಷ್ಯಂ

ॐ ✝ ☪ INDIA'S MOST POPULAR ASTROLOGER ॐ ✝ ☪

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

